ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560012

ಪರೀಕ್ಷಾ ತುರ್ತು

ದಿನಾಂಕ : 28.02.2019

## ಸೂಚನೆಗಳು

1. ದಿನಾಂಕ 27.02.2019 ರಂದು ಇಲಾಖಾ ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಿರುವ ಜಿಲ್ಲಾ ಜಾಗೃತದಳ, ಉಪಮುಖ್ಯ ಅಧೀಕ್ಷಕರು ಹಾಗೂ ವಿಶೇಷ ಜಾಗೃತದಳದ ಸದಸ್ಯರುಗಳ ಪಟ್ಟಿಯಲ್ಲಿರುವ ಸದಸ್ಯರುಗಳ ಮಕ್ಕಳು ದ್ವಿತೀಯ ಪಿಯುಸಿ ಪರೀಕ್ಷೆ ಬರೆಯುತ್ತಿದ್ದಲ್ಲಿ ಖಚಿತ ಪಡಿಸಿಕೊಂಡು ಸದರಿ ಕಾರ್ಯಕ್ಕೆ ನೇಮಿಸಿರುವ ಸಿಬ್ಬಂದಿಯನ್ನು ಬಿಡುಗಡೆ ಮಾಡಿ ಆ ಜಾಗಕ್ಕೆ ಸೂಕ್ತ ಸಿಬ್ಬಂದಿಯನ್ನು ಪರ್ಯಾಯವಾಗಿ ನಿಮ್ಮ ಹಂತದಲ್ಲಿ ನೇಮಿಸಿಕೊಳ್ಳುವುದು.
2. <u>ಜಿಲ್ಲಾ ಜಾಗೃತದಳ:</u> ಜಿಲ್ಲಾ ಜಾಗೃತದಳಕ್ಕೆ ನೇಮಕಾತಿ ಹೊಂದಿರುವ ಸದಸ್ಯರುಗಳು ದಿನಾಂಕ 28.02.2019 ರಂದು ಸಂಬಂದಿಸಿದ ಜಿಲ್ಲಾ ಉಪನಿರ್ದೇಶಕರುಗಳಿಗೆ ವರದಿ ಮಾಡಿಕೊಳ್ಳುವುದು. ಈ ಬಾರಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಉಪನಿರ್ದೇಶಕರ ನೇತೃತ್ವದಲ್ಲಿ ಒಂದು ಜಿಲ್ಲಾ ಜಾಗೃತ ದಳ ಹಾಗೂ ಹಿರಿಯ ಪ್ರಾಚಾರ್ಯರ ನೇತೃತ್ವದಲ್ಲಿ 2ನೇ ಜಿಲ್ಲಾ ಜಾಗೃತದಳ ನೇಮಿಸಲಾಗಿದೆ. ಅದರಂತೆ ಜಿಲ್ಲಾ ಉಪನಿರ್ದೇಶಕರ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುವುದು.
3. <u>ತಾಲ್ಲೂಕು ಜಾಗೃತ ದಳ :</u> ಈ ಬಾರಿ ತಾಲ್ಲೂಕು ಮಟ್ಟದ ಜಾಗೃತದಳ ನೇಮಿಸಲಾಗಿಲ್ಲ.
4. <u>ಉಪಮುಖ್ಯ ಅಧೀಕ್ಷಕರು :</u> ಉಪಮುಖ್ಯ ಅಧೀಕ್ಷಕರು ನೇಮಿಸಿರುವ ಪರೀಕ್ಷಾ ಕೇಂದ್ರದಲ್ಲಿ ದಿನಾಂಕ 28.02.2019 ರಂದು ಹಾಜರಾಗುವುದು. ನಿಮ್ಮ ಮಕ್ಕಳು ದ್ವಿತೀಯ ಪಿಯುಸಿ ಪರೀಕ್ಷೆ ಬರೆಯುತ್ತಿದ್ದಲ್ಲಿ ಇದನ್ನು ಉಪನಿರ್ದೇಶಕರ ಗಮನಕ್ಕೆ ತಂದು ಸೂಕ್ತ ಬದಲಾವಣೆ ಮಾಡಿಸಿ ಬೇರೆಯವರನ್ನು ಈ ಕಾರ್ಯಕ್ಕೆ ನೇಮಿಸುವಂತೆ ತಿಳಿಸುವುದು.
5. <u>ವಿಶೇಷ ಜಾಗೃತ ದಳ :</u> ಒಂದು ಪರೀಕ್ಷಾ ಕೇಂದ್ರಕ್ಕೆ 2 ರಿಂದ 3 ಜನರನ್ನು ವಿಶೇಷ ಜಾಗೃತ ದಳದ ಸದಸ್ಯರನ್ನಾಗಿ ನೇಮಿಸಲಾಗಿದೆ. ವಿಶೇಷ ಜಾಗೃತ ದಳದ ಸದಸ್ಯರು ದಿನಾಂಕ 01.03.2019 ರಂಧು ಬೆಳಿಗ್ಗೆ 9.00 ಗಂಟೆಗೆ ನಿಮ್ಮನ್ನು ನೇಮಿಸಿರುವ ಪರೀಕ್ಷಾ ಕೇಂದ್ರದ ಮುಖ್ಯಸ್ಥರಲ್ಲಿ ಹಾಜರಾಗುವುದು. ಆ ದಿನದ ಪರೀಕ್ಷೆ ಮುಗಿದ ನಂತರ ನೀವು ನೇಮಕಾತಿ ಹೊಂದಿರುವ ಜಿಲ್ಲೆಯ ಉಪನಿರ್ದೇಶಕರ ಕಛೇರಿಯಲ್ಲಿ ವರದಿ ಮಾಡಿಕೊಳ್ಳುವುದು. ಜಿಲ್ಲಾ ಉಪನಿರ್ದೇಶಕರು ವರದಿ ಮಾಡಿಕೊಂಡ ಸದಸ್ಯರುಗಳನ್ನು 2/3 ದಿನಕ್ಕೊಮ್ಮೆ ನಿಮ್ಮ ಜಿಲ್ಲೆಯ ಒಂದು ಪರೀಕ್ಷಾ ಕೇಂದ್ರದಿಂದ ಮತ್ತೊಂದು ಪರೀಕ್ಷಾ ಕೇಂದ್ರಕ್ಕೆ (change from one exam centre to anther examination centre on rotation basis once in 2 or 3 days) ಬದಲಾಯಿಸುವುದು.
6. ಮೇಲೆ ನೇಮಿಸಿರುವ ಜಿಲ್ಲಾ ಜಾಗೃತದಳ, ಉಪಮುಖ್ಯ ಅಧೀಕ್ಷಕರು ಹಾಗೂ ವಿಶೇಷ ಜಾಗೃತದಳಧ ಸದಸ್ಯರುಗಳು ಕಾರಣಾಂತರಗಳಿಂದ ಸಂಬಂಧಿಸಿದ ಪರೀಕ್ಷಾ ಕೇಂದ್ರಗಳಲ್ಲಿ ನಿಗಧಿತ ದಿನಾಂಕದಂದು ಹಾಜರಾಗದಿದ್ದರೆ ಜಿಲ್ಲಾ ಉಪನಿರ್ದೇಶಕರು ಅವರ ಹಂತದಲ್ಲೇ ಸೂಕ್ತ ಬದಲಾವಣೆ ಮಾಡಿ ಪರೀಕ್ಷಾ ಕಾರ್ಯಕ್ಕೆ ಯಾವುದೇ ಅಡ್ಡಿಯಾಗದಂತೆ ಪರ್ಯಾಯ ವ್ಯವಸ್ಥೆ ಮಾಡುವುದು.
7. ಮೇಲೆ ತಿಳಿಸಿರುವ ಜಾಗೃತ ದಳಗಳ ಜೊತೆಗೆ ಜಿಲ್ಲಾಧಿಕಾರಿಗಳಿಗೆ ವಿಶೇಷ ವಿಕ್ಷಕರನ್ನು ನೇಮಿಸುವ ಅಧಿಕಾರವನ್ನು ನೀಡಲಾಗಿದೆ.

Prashanth K. (signature) 28/2

ನಿರ್ದೇಶಕರು (ಪರೀಕ್ಷೆ)

ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಯನ್ನು :

1. ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ.

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560012

ದಿನಾಂಕ : 28.02.2019

## ವಿಶೇಷ ಜಾಗೃತದಳದ ಸದಸ್ಯರ ಕರ್ತವ್ಯಗಳು (INSTRUCTION TO SPECIAL INVIGILATION SQUAD) :

1. ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಕಳುಹಿಸಲಾಗಿರುವ ಪರೀಕ್ಷಾ ನಿಯಾಮನುಸಾರ ಪರೀಕ್ಷೆಗಳು ನಡೆಯುತ್ತಿವೆಯೇ? ಎಂಬ ಬಗ್ಗೆ ಗಮನ ಹರಿಸುವುದು. ವಿಶೇಷ ಜಾಗೃತದಳದ ಸದಸ್ಯರು ಆಯುಕ್ತಾಲಯದ ಕಣ್ಣಿನಂತೆ ಪರೀಕ್ಷಾ ಕೇಂದ್ರದಲ್ಲಿ ಕಾರ್ಯ ನಿರ್ವಹಿಸಬೇಕು.
2. ಪ್ರತಿ ದಿನ ಪ್ರಶ್ನೆಪತ್ರಿಕೆಗಳ ಬಂಡಲ್‌ಗಳನ್ನು ಪರೀಕ್ಷಾ ಕೇಂದ್ರಗಳಲ್ಲಿ ತೆರೆಯುವ ಸಂದರ್ಭಗಳಲ್ಲಿ ಹಾಜರಿದ್ದು, ತೆರೆದ ನಂತರ ಸಂಬಂಧಪಟ್ಟವರು ಪ್ರಮಾಣೀಕರಿಸಬೇಕು. ಬೆಳಗ್ಗೆ 9.00 ಘಂಟೆಯಿಂದ 9.30 ರವರೆಗೆ
3. ಪ್ರಶ್ನೆಪತ್ರಿಕೆಗಳು ಪರೀಕ್ಷೆ ಮುಗಿಯುವ ವರೆಗೂ ಪರೀಕ್ಷಾ ಕೇಂದ್ರದಿಂದ ಹೊರಗೆ ಹೋಗದಂತೆ ನೋಡಿಕೊಳ್ಳುವುದು. ಮುಖ್ಯ ಅಧೀಕ್ಷಕರು ಮತ್ತು ಸಹ ಮುಖ್ಯ ಅಧೀಕ್ಷಕರು ಪ್ರತಿ ದಿನದ ಲೆಕ್ಕ ಇಟ್ಟಿದ್ದಾರೆಯೇ ಎಂದು ಗಮನಿಸುವುದು.
4. ಅಭ್ಯರ್ಥಿಗಳು ನಿಗಧಿತ ಸ್ಥಳ ಬದಲಾವಣೆ ಮಾಡಿ ಬೇರೆ ಸ್ಥಳದಲ್ಲಿ ಕೂರಿಸಿ ಪರೀಕ್ಷೆ ಬರೆಸದಂತೆ ನೋಡಿಕೊಳ್ಳುವುದು.
5. ಪರೀಕ್ಷಾ ಕೇಂದ್ರದಲ್ಲಿ ಕರ್ತವ್ಯಕ್ಕೆ ಹಾಜರಾದ ವಿಶೇಷ ಜಾಗೃತ ದಳದ ಸದಸ್ಯರುಗಳು ಆ ಕೇಂದ್ರದಲ್ಲಿ ಪರೀಕ್ಷೆ ನಡೆಯುವ ಕೊಠಡಿಗಳ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳನ್ನು ಹಂಚಿಕೊಂಡು. ಕಾರ್ಯ ನಿರ್ವಹಿಸುವುದು.
6. ಆಯಾ ದಿನದ ಪ್ರಶ್ನೆ ಪತ್ರಿಕೆಗಳೇ ಎಂಬ ಬಗ್ಗೆ ಬಾಕ್ಸ್ ಮೇಲೆ ಅಂಟಿಸಿದ ಲೇಬಲ್‌ನ್ನು ಅತ್ಯಂತ ಜಾಗರೂಕತೆಯಿಂದ ಪರಿಶೀಲಿಸಿ 10 ನಿಮಿಷ ಮುಂಚಿತವಾಗಿ ತೆರೆಯಲು ಅವಕಾಶ ನೀಡಬೇಕು.
7. ಆಯಾ ದಿನದ ಪರೀಕ್ಷೆ ಮುಗಿದ ನಂತರ ಉತ್ತರ ಪತ್ರಿಕೆಗಳ ಚೀಲಗಳನ್ನು ಒಬ್ಬರು ಸಹಾಯಕರು ಹಾಗೂ ಇಬ್ಬರು ಉಪನ್ಯಾಸಕರ ತಂಡದೊಂದಿಗೆ ಅಂದೇ ಸಂಬಂಧಿಸಿದ ಅಂಚೆ ಕಛೇರಿಗೆ ಮುಟ್ಟಿಸಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳವುದು. ಮೌಲ್ಯಮಾಪನ ಕೇಂದ್ರಕ್ಕೆ / ಅಂಚೆ ಕಛೇರಿಗೆ ಹೋಗುವ ತಂಡವನ್ನು ಪ್ರತಿದಿನ ಬದಲಾಯಿಸುವಂತೆ ನೋಡಿಕೊಳ್ಳುವುದು. ಈ ಕಾರ್ಯದ ಬಗ್ಗೆ ಒಂದು ರಿಜಿಸ್ಟರ್‌ನಲ್ಲಿ ಮಾಹಿತಿಗಳನ್ನು ನೋಂದಾಯಿಸುವುದು. ಉತ್ತರ ಪತ್ರಿಕೆಯ ಬಂಡಲ್‌ಗಳನ್ನು ಪರೀಕ್ಷಾ ಕೇಂದ್ರದಿಂದ ರವಾನಿಸುವ ವರೆಗೂ ಕೇಂದ್ರದಲ್ಲಿಯೇ ಹಾಜರಿರಬೇಕು.
8. ಪರೀಕ್ಷಾ ಕೇಂದ್ರದಲ್ಲಿ ಯಾವುದೇ ರೀತಿಯ ಪರೀಕ್ಷಾ ಅಕ್ರಮ, ಅವ್ಯವಹಾರಗಳು ನಡೆಯದಂತೆ ಪರೀಕ್ಷೆಗಳು ನಡೆಯುತ್ತಿವೆಯೇ ಎಂಬುದನ್ನು ಗಮನಿಸಬೇಕು.
9. ಇಲಾಖೆ ಮುದ್ರಿಸಿದ ಮ್ಯಾಥಮೆಟಿಕಲ್ ಟೇಬಲ್‌ನ್ನು ಗಣಿತಶಾಸ್ತ್ರ, ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ವಿಷಯಗಳಲ್ಲಿ ಉಪಯೋಗಿಸಲು ಅವಕಾಶವಿದೆ. ಸ್ಟ್ಯಾಟಿಸ್ಟಿಕಲ್ ಟೇಬಲ್‌ನ್ನು ಸಂಖ್ಯಾಶಾಸ್ತ್ರ, ಲೆಕ್ಕಶಾಸ್ತ್ರ ವಿಷಯಗಳಲ್ಲಿ ಉಪಯೋಗಿಸಲು ಅವಕಾಶವಿದೆ. ಅಂತಹ ಸಂದರ್ಭದಲ್ಲಿ ನಕಲು ಮಾಡುವ ವಸ್ತುವೆಂದು ತೀರ್ಮಾನಿಸಕೂಡದು.

10. ಪರೀಕ್ಷಾ ಕೇಂದ್ರಕ್ಕೆ ವಿದ್ಯಾರ್ಥಿಗಳಾಗಲೀ, ಸಿಬ್ಬಂದಿಯವರಾಗಲೀ ಮೊಬೈಲ್ ಫೋನ್‌ಗಳನ್ನು ತರುವುದನ್ನು ಸಂಪೂರ್ಣವಾಗಿ ನಿಷೇದಿಸುವುದು.

11. ಪರೀಕ್ಷಾ ಕೊಠಡಿಯನ್ನು ಓಡಾಡುವಾಗ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಹಾಗೂ ಅವರಿಗೆ ಮಾನಸಿಕ ಒತ್ತಡ ಬೀಳದಂತೆ ಸೂಕ್ತ ತಪಾಸಣೆ ನಡೆಸುವುದು. ಪರೀಕ್ಷಾ ಕೇಂದ್ರದಲ್ಲಿ ನಕಲು ಆಗದಂತೆ ಹಾಗೂ ಪರೀಕ್ಷಾ ದುರಾಚರಣೆ ನಡೆಯದೇ ಸುಸೂತ್ರವಾಗಿ ಪರೀಕ್ಷಾ ನಿಯಮಾನುಸಾರ ಪರೀಕ್ಷೆ ನಡೆಯುವಂತೆ ನೋಡಿಕೊಳ್ಳುವುದು. ಮೊಬೈಲ್ ಸ್ಕ್ವಾಡ್‌ನವರು ಪರೀಕ್ಷಾ ದುರಾಚರಣೆಯ ಪ್ರಕರಣವನ್ನು ದಾಖಲು ಮಾಡಿದರೆ ವಿಶೇಷ ಜಾಗೃತ ದಳದ ಸದಸ್ಯರುಗಳು ಕರ್ತವ್ಯ ಲೋಪವೆಸಗಿದ್ದಾರೆಂದು ಪರಿಗಣಿಸಿ ಹೊಣೆಗಾರರನ್ನಾಗಿ ಮಾಡಲಾಗುವುದು.

12. ಆಯಾ ದಿನದ ಪರೀಕ್ಷೆ ಮುಗಿದ ನಂತರ ಎಲ್ಲಾ ವಿದ್ಯಾರ್ಥಿಗಳಿಂದ ಉತ್ತರ ಪತ್ರಿಕೆಗಳನ್ನು ಪಡೆಯಲಾಗಿದೆಯೇ ಎಂಬುದನ್ನು ಪರಿಶೀಲಿಸಿ ಅವುಗಳನ್ನು ಅಂಕಪಟ್ಟಿವಾರು ಜೋಡಿಸಿ ನಿಯಾಮನುಸಾರ ಲಕೋಟೆಗಳಲ್ಲಿ ಇಟ್ಟಿದ್ದಾರೆಯೇ ಹಾಗೂ ಮುಖ್ಯ ಅಧೀಕ್ಷಕರುಗಳಿಗೆ ನೀಡಿರುವ ಪರೀಕ್ಷಾ ನಿಯಾಮನುಸಾರ ಉತ್ತರ ಪತ್ರಿಕೆ ಬಂಡಲ್‌ಗಳನ್ನು ಸಿದ್ಧಪಡಿಸಿದ್ದಾರೆಯೇ ಎಂಬುದನ್ನು ಪರಿಶೀಲಿಸಿ ಪರೀಕ್ಷಾ ಕೇಂದ್ರದಲ್ಲಿ ಯಾವುದೇ ಪರೀಕ್ಷಾ ಅಕ್ರಮ ನಡೆಯದಂತೆ ಎಲ್ಲಾ ರೀತಿಯ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ. ಒಂದು ವೇಳೆ ಪರೀಕ್ಷೆಯಲ್ಲಿ ನಕಲು ಮಾಡುವುದು ಮತ್ತಿತ್ತರ ಪರೀಕ್ಷಾ ಅವ್ಯವಹಾರಗಳು ನಡೆಯುವುದು ಪತ್ತೆಹಚ್ಚಿದಲ್ಲಿ, ಪರೀಕ್ಷಾ ದುರಾಚರಣೆಗೆ ಗುರಿಪಡಿಸಿ ಪ್ರಕರಣಗಳನ್ನು ದಾಖಲು ಮಾಡುವಂತೆ ಮುಖ್ಯ ಅಧೀಕ್ಷಕರಿಗೆ ಸೂಚಿಸುವುದು. ಯಾವುದೇ ರೀತಿಯ ಪರೀಕ್ಷಾ ಅಕ್ರಮಗಳು ನಡೆದ ಸಂದರ್ಭದಲ್ಲಿ ಕೂಡಲೇ ಜಿಲ್ಲಾ ಉಪನಿರ್ದೇಶಕರು / ನಿರ್ದೇಶಕರ ಗಮನಕ್ಕೆ ತರಲು ಸೂಚಿಸಿದೆ. ಪರೀಕ್ಷೆ ನಡೆದ ಬಗ್ಗೆ ಪರೀಕ್ಷೆಯ ನಂತರ ಒಂದು ಸೂಕ್ತ ವರದಿಯನ್ನು ನಿರ್ದೇಶನಾಲಯಕ್ಕೆ ಕಳುಹಿಸಲು ಸೂಚಿಸಿದೆ ಹಾಗೂ ವಿಶೇಷ ಜಾಗೃತದಳದ ಸದಸ್ಯರು ಪರೀಕ್ಷೆ ಮುಗಿದ ನಂತರ ಕಾರ್ಯ ನಿರ್ವಹಿಸಿದ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆದ ಬಗ್ಗೆ ಒಂದು ವರದಿಯನ್ನು ಉಪನಿರ್ದೇಶಕರು (ಪರೀಕ್ಷೆ) ಇವರಿಗೆ ಸಲ್ಲಿಸಬೇಕು.

Prashanth K.

ನಿರ್ದೇಶಕರು (ಪರೀಕ್ಷೆ)

ಪದವಿ ಪೂರ್ವ ಶಿಕ್ಷಣ ಇಲಾಖೆ